ಕರ್ನಾಟಕ ವಿಧಾನ ಪರಿಷತ್ತು

144ನೇ ಅಧಿವೇಶನ -2021

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.	738(946)
ಮಾನ್ಯ ಸದಸ್ಯರ ಹೆಸರು	ಡಾ.ಚಂದ್ರಶೇಖರ್ ಬಿ.ಪಾಟೀಲ್ (ಪದವೀಧರ ಕ್ಷೇತ್ರ)
ಉತ್ತರಿಸಬೇಕಾದ ಸಚಿವರು	ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
ಉತ್ತರಿಸಬೇಕಾದ ದಿನಾಂಕ	20.09.2021

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಸಹಾಯಕ ಕುಲಸಚಿವರಿಂದ ಉಪ ಕುಲಸಚಿವರು ಮತ್ತು ಇತರೆ ಹುದ್ದೆಗಳಿಗೆ ಪದೋನ್ನತಿ ನೀಡುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು; (ನಿಯಮಾವಳಿಗಳ ಮಾಹಿತಿ ಒದಗಿಸುವುದು)	ವಿಶ್ವವಿದ್ಯಾಲಯಗಳಲ್ಲಿನ ಬೋಧಕೇತರ ನೌಕರರ ಸೇವಾ ಷರತ್ತುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 40 ರಲ್ಲಿ ನಿಯಮಿಸಿರುವಂತೆ ಪರಿನಿಯಮಗಳ ಮೂಲಕ ಉಪಬಂಧಿಸಲಾಗುತ್ತದೆ. ಉಪಲಬ್ಧಿಗಳೂ ಸೇರಿದಂತೆ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಪರಿನಿಯಮಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 40ರ ಉಪ ಪ್ರಕರಣ (3)ರಲ್ಲಿ ನಿಯಮಿಸಿರುವಂತೆ, ರಾಜ್ಯ ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರಬೇಕಾಗುತ್ತದೆ. ಆದುದರಿಂದ, ನೌಕರರ ನೇಮಕಾತಿ, ಪದೋನ್ನತಿ ಹಾಗೂ ಇತರೆ ಎಲ್ಲಾ ಸೇವಾ ಷರತ್ತಗಳನ್ನು ವೃಂದ ಮತ್ತು ನೇಮಕಾತಿ ಪರಿನಿಯಮಗಳ ಮೂಲಕ ವಿನಿಮಯನಗೊಳಿಸಲಾಗುತ್ತದೆ.
ಆ	ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಅನುಮೋದನೆ ಪಡೆದು ಸಹಾಯಕ ಕುಲಸಚಿವ ಹುದ್ದೆಯಿಂದ ಉಪ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡುವಲ್ಲಿ ನಿಯಮ ಉಲ್ಲಂಘನೆ, ಭ್ರಷ್ಟಾಚಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿನ ಅವಕಾಶಗಳಿಗೆ ವ್ಯತಿರಿಕ್ತವಾಗಿ ಸಹಾಯಕ ಕುಲಸಚಿವ ಹುದ್ದೆಯಿಂದ ಉಪ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡಿರುವುದು ಸರ್ಕಾರದ ತಿಳುವಳಿಕೆಗೆ ಬಂದಿದ್ದು, ವಿಶ್ವವಿದ್ಯಾಲಯದ ಆಡಳಿತಾತ್ಮಕ ಪ್ರಕಾರ್ಯಗಳ ಸಮರ್ಪಕ ನಿರ್ವಹಣೆಯ ಹಿತದೃಷ್ಟಿಯಿಂದ ಕೈಗೊಳ್ಳಲಾಗಿರುವ ಪೂರ್ವೋಕ್ತ ಅಸಂಗತ ಪದೋನ್ನತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಎಸಗಿರುವುದು ಗಮನಕ್ಕೆ ಬಂದಿರುವುದಿಲ್ಲ..

--2

ಇ	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು):	ಪ್ರಶ್ನಿತ ಪದೋನ್ನತಿಗಳನ್ನು ನೀಡಲಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಆದೇಶವನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿನ ಉಪಬಂಧಗಳನುಸಾರ ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಕಾನೂನಾತ್ಮಕ ಕ್ರಮ ಜರುಗಿಸುವಂತೆ ಸರ್ಕಾರದ ಪತ್ರಸಂಖ್ಯೆ:ಇಡಿ 87 ಯುಬಿವಿ 2020, ದಿನಾಂಕ:06.03.2021ರಲ್ಲಿ ಸೂಚನೆ ನೀಡಲಾಗಿದೆ.

ಇಡಿ/303/ಯುಬಿವಿ/2021

(ಡಾ॥ ಅಶ್ವಥ್ ನಾರಾಯಣ ಸಿ.ಎನ್)

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,

ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು